KABK200010492020

VIJAYAKUMAR KANNUR

Digitally signed by VIJAYAKUMAR KANNUR
Date: 2024.11.15 16:56:17 +0530

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಮುಧೋಳ

ಉಪಸ್ಥಿತರು: ಶ್ರೀ ವಿಜಯಕುಮಾರ ಕನ್ನೂರು,
ಬಿ.ಎ.ಎಲ್.ಎಲ್.ಬಿ. (ಸ್ಪೇಷಲ್)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ವ ಪ್ರ.ದ.ನ್ಯಾ.
ದಂಡಾಧಿಕಾರಿಗಳು, ಮುಧೋಳ.

**ದಿನಾಂಕ: 13 ನೇ ಸೆಪ್ಟೆಂಬರ್ 2024**

**ಅಸಲು ದಾವೆ ನಂ.207/2020**

ವಾದಿ : **1.** ಶ್ರೀಮತಿ. ಕಸ್ತುರೆವ್ವ ಗಂಡ ಗಂಗಪ್ಪ ಮಾದರ,
ವಯಾ: **42** ವರ್ಷ, ಉ: ಮನೆಕೆಲಸ,
ಸಾಃ ಅಂಕಲಗಿ, ಪೋಃ ಉದಗಟ್ಟಿ,
ಕಲಾದಗಿ, ತಾ ಮತ್ತು ಜಿಃ ಬಾಗಲಕೋಟ.

(ವಾದಿಯರ ಪರ ಶ್ರೀ ಎಸ್.ಆರ್.ಎಲ್, ವಕೀಲರು)

// ವಿರುದ್ಧ //

ಪ್ರತಿವಾದಿಯರು : **1.** ಶ್ರೀಮತಿ.ಬಾಳವ್ವಾ ಗಂಡ ಹಣಮಪ್ಪ ಗುಡಿಹಿಂದ,
ಸಾಃ ಗುಲಗಾಲ ಜಂಬಗಿ, ತಾಃ ಮುಧೋಳ,
ಜಿಃ ಬಾಗಲಕೋಟ. (ಮೃತ).

**1** ಎ. ಶ್ರೀ.ವಿಠ್ಠಲ ತಂದೆ ಹಣಮಪ್ಪಾ ಗುಡಿಹಿಂದ,
ವಯಾ: **41** ವರ್ಷ, ಉ: ಕೂಲಿ,
ಸಾಃ ಗುಲಗಾಲ ಜಂಬಗಿ, ತಾಃ ಮುಧೋಳ,
ಜಿಃ ಬಾಗಲಕೋಟ.

**1** ಬಿ. ಶ್ರೀ.ಪುಂಡಲಿಕ ತಂದೆ ಹಣಮಪ್ಪಾ ಗುಡಿಹಿಂದ,
ವಯಾ: **38** ವರ್ಷ, ಉ: ಕೂಲಿ,
ಸಾಃ ಗುಲಗಾಲ ಜಂಬಗಿ, ತಾಃ ಮುಧೋಳ,
ಜಿಃ ಬಾಗಲಕೋಟ.

**2.** ಶ್ರೀಮತಿ.ತಾಯವ್ವ ತಂದೆ ದಶಗಿರೆಪ್ಪ,
ಸಾಃ ಜಾಡರ ಅರಳಿಕಟ್ಟಿ, ತಾಃ ಮುಧೋಳ,
ಜಿಃ ಬಾಗಲಕೋಟ.

**4.** ಶ್ರೀ.ಗಿರಿಯಪ್ಪ ತಂದೆ ದಶಗಿರೇಪ್ಪ ಮಾದರ,
ಸಾಃ ಜಾಡರ ಅರಳಿಕಟ್ಟಿ, ತಾಃ ಮುಧೋಳ,
ಜಿಃ ಬಾಗಲಕೋಟ.

(ಪ್ರತಿವಾದಿ **1** ಮೃತ
ಪ್ರತಿವಾದಿ **2** ರಿಂದ **4** ರವರ ಪರವಾಗಿ ಶ್ರೀ. ಎಮ್.ಎಸ್.ಎಮ್ ವಕೀಲರು
ಪ್ರತಿವಾದಿ **1**(ಎಬಿ) ರವರ ಪರವಾಗಿ ಶ್ರೀ.ಬಿ.ಬಿ.ಬಿ ವಕೀಲರು)

## ಮಧ್ಯಂತರ ಅರ್ಜಿ ಸಂಖ್ಯೆ 12 ರ ಮೇಲಿನ ಆದೇಶ

ವಾದಿಯ ಪರ ನ್ಯಾಯವಾದಿಗಳು ಮಧ್ಯಂತರ ಅರ್ಜಿ ಸಂಖ್ಯೆ.**12** ಅನ್ನು ದಿವಾಣಿ ಪ್ರಕ್ರಿಯಾ ಸಂಹಿತೆಯ ಕ್ರಮಾದೇಶ **39** ನಿಯಮ **1** ಮತ್ತು **2** ರ ಅಡಿಯಲ್ಲಿ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿ ಈ ದಾವೆಯ ಅಧಿವಿಚಾರಣೆ ಆಗುವವರೆಗೂ ಲಕ್ಷಾನಟ್ಟಿ ಗ್ರಾಮದ ರಿ.ಸರ್ವೇ.ನಂ.**9/2,** ಜಾಡರ ಅರಳಿಕಟ್ಟಿ ಗ್ರಾಮದ ರಿ.ಸರ್ವೇ.ನಂ.**75/2** ಬಿ ಹಾಗೂ ರಿ.ಸರ್ವೇ.ನಂ.**75/6** ಹಾಗೂ ಪಾಲಕಿಮಾನ್ಯ ಗ್ರಾಮದ ರಿ.ಸರ್ವೇ.ನಂ.**65/37** ಮತ್ತು ರಿ.ಸರ್ವೇ.ನಂ.**65/115** ರ ಜಮೀನುಗಳನ್ನು ಈ ದಾವೆ ನಿಕಾಲೆಯಾಗುವವರೆಗೂ ಮಾರಾಟ ವ ಹಸ್ತಾಂತ ಮಾಡದಂತೆ ಈ ಪ್ರತಿವಾದಿ **1** ರಿಂದ **5** ರವರ ವಿರುದ್ಧ ತಾತ್ಕಾಲಿಕ ತಡೆಯಾಜ್ಞೆಯನ್ನು ನೀಡುವಂತೆ ಕೋರಿ ಈ ಮಧ್ಯಂತರ ಅರ್ಜಿಯನ್ನು ಸಲ್ಲಿಸಿರುವರು.

**2.** ಸದರಿ ಮಧ್ಯಂತರ ಅರ್ಜಿಗೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿ ವಾದಿ ಹೇಳುವುದೇನೆಂದರೆ, ಈ ದಾವೆಯನ್ನು ವಾದಿಯು ದಾವಾ ಆಸ್ತಿಯಲ್ಲಿ ವಾದಿಗೆ **1/5** ಹಿಸ್ಸೆಯನ್ನು ನೀಡುವಂತೆ ಕೋರಿ ಸಲ್ಲಿಸಿರುವರು. ಕುಟುಂಬದ ಮೂಲಪುರುಷ ದಶಗಿರೆಪ್ಪ ತಂದೆ ಹಣಮಪ್ಪ ಮಾದರ ಮತ್ತು ಅವರ ಹೆಂಡತಿ ಯಂಕವ್ವ ಅವರಿಗೆ **5** ಜನ ಮಕ್ಕಳಿರುವರು. ವಾದಿ ಮತ್ತು ಪ್ರತಿವಾದಿ ನಂ.**1** ರಿಂದ **5** ರವರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿರುವರು. ದಾವಾ ಆಸ್ತಿಗಳು ವಾದಿ ಹಾಗೂ ಪ್ರತಿವಾದಿ **1** ರಿಂದ **5** ರವರ ಪಿತ್ರಾರ್ಜಿತ ಆಸ್ತಿಗಳಾಗಿರುವವು. ವಾದಿಯು ತನ್ನ ಹಿಸ್ಸೆಯನ್ನು ಪ್ರತಿವಾದಿಯರಿಗೆ ಪಾಲು ವಿಭಾಗ ಮಾಡಿ ದಾವಾ ಆಸ್ತಿಯನ್ನು ನೀಡುವಂತೆ ಕೇಳಿಕೊಂಡರೂ ಸಹ ಪ್ರತಿವಾದಿಯರು ಪಾಲು ವಿಭಾಗ ಮಾಡಿ ಕೊಟ್ಟಿರುವುದಿಲ್ಲ. ಆದ್ದರಿಂದ ಈ ದಾವೆಗೆ ವ್ಯಾಜ್ಯ ಕಾರಣ ಉಂಟಾಗಿರುವುದರಿಂದ ಈ ಪ್ರತಿವಾದಿ **1** ರಿಂದ **5** ರವರ ವಿರುದ್ಧ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ಏಕಪಕ್ಷೀಯ ತಾತ್ಕಾಲಿಕ ತಡೆಯಾಜ್ಞೆಯನ್ನು ನೀಡಬೇಕೆಂದು ಕೋರಿಕೊಂಡಿರುವರು.

**3.** ದಾವಾ ಸಮನ್ಸ್ ಪ್ರತಿವಾದಿಯರ ವಿರುದ್ಧ ಜಾರಿಯಾದ ನಂತರ ಪ್ರತಿವಾದಿ ನಂ.**1** ರವರು ಮೃತರಾಗಿರುವರು. ಪ್ರತಿವಾದಿ **2** ರಿಂದ **3** ರವರು ಶ್ರೀ. ಎಮ್.ಎಸ್.ಎಮ್., ವಕೀಲರ ಮೂಲಕ ಹಾಗೂ ಪ್ರತಿವಾದಿ ನಂ.**1**(ಎಬಿ) ಅವರು ಶ್ರೀ. ಬಿ.ಬಿ.ಬಿ., ವಕೀಲರ ಮೂಲಕ ಹಾಜರಾಗಿರುವರು. ಪ್ರತಿವಾದಿ **5** ರವರು ತಮ್ಮ ಲಿಖಿತ ಪತ್ರವನ್ನು ಸಲ್ಲಿಸಿರುವರು. ಈ ಪ್ರತಿವಾದಿಯರು ಈ ಮಧ್ಯಂತರ ಅರ್ಜಿಗೆ ತಮ್ಮ ಲಿಖಿತ ಪತ್ರವನ್ನೇ ತಕರಾರು ಎಂದು ಹೇಳಿ ಮೆಮೋವನ್ನು ಸಲ್ಲಿಸಿರುವರು.

ಪ್ರತಿವಾದಿ **2** ರಿಂದ **4** ರವರು ಸಲ್ಲಿಸಿದ ಲಿಖಿತ ಪತ್ರದ ಸಂಕ್ಷಿಪ್ತ ಸಾರಾಂಶಃ

**4**. ವಾದಿ ಮತ್ತು ಪ್ರತಿವಾದಿಯರ ಸಂಬಂಧವನ್ನು ಒಪ್ಪಿಕೊಂಡಿರುವರು. ಆದರೆ ವಾದ ಪತ್ರದ ಖಂಡಿಕೆ **3** ರಲ್ಲಿ ಹೇಳಿರುವಂತೆ ವಾದಿ ಮತ್ತು ಪ್ರತಿವಾದಿಯರು ಸಾಮೂಹಿಕ ವಹಿವಾಟು ಮಾಡುತ್ತಿರುವರು ಎಂಬ ಸಂಗತಿ ನಿಜವಿರುವುದಿಲ್ಲ. ಕುಟುಂಬದ ಮೂಲ ಪುರುಷ ದಾವಾ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ರೀತಿಯಾದ ದಾಖಲೆಗಳನ್ನು ಮಾಡದೆ ಮೃತ ಪಟ್ಟಿರುವರು ಎಂಬ ಸಂಗತಿ ನಿಜವಿರುವುದಿಲ್ಲ. ದಾವಾ ಆಸ್ತಿಯಲ್ಲಿ ವಾದಿಗೆ **1/5** ಹಿಸ್ಸೆ ಇರುತ್ತೆ ಎಂಬ ಸಂಗತಿ ಸಹ ನಿಜವಿರುವುದಿಲ್ಲ. ಪ್ರತಿವಾದಿಯರು ಖೊಟ್ಟಿಯಾದ ದಾಖಲೆಗಳನ್ನು ಸೃಷ್ಟಿಮಾಡಿಕೊಂಡಿರುವರು ಎಂಬ ಸಂಗತಿಯು ಸಹ ನಿಜವಿರುವುದಿಲ್ಲ. ವಾದಿ, ಪ್ರತಿವಾದಿ **1** ಮತ್ತು **3** ರವರಿಗೆ ವಿವಾಹದ ಸಮಯದಲ್ಲಿ ಸಾಕಷ್ಟು ಹಣ ಖರ್ಚು ಮಾಡಿ ಬಂಗಾರ ಹಣ ನೀಡಿದ್ದು ಅವರು ಖಾಯಂ ಆಗಿ ಗಂಡನ ಮನೆಯಲ್ಲಿ ವಾಸವಾಗಿರುವರು. ಆದ್ದರಿಂದ ದಾವಾ ಆಸ್ತಿಯಲ್ಲಿ ಸಾಮೂಹಿಕ ಕಬ್ಜೆಯನ್ನು ಹೊಂದಿರುವುದಿಲ್ಲ. ಹಾಗೂ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಹಕ್ಕು ಬದಲಾವಣೆ ಆದೇಶವಾಗಿದ್ದು ಅವುಗಳನ್ನು ವಾದಿಯು ಪ್ರಶ್ನಿಸಿರುವುದಿಲ್ಲ. ಆದ್ದರಿಂದ ಈ ದಾವೆಯು ಮತ್ತು ಈ ಮಧ್ಯಂತರ ಅರ್ಜಿಯು ಕಾನೂನಿನಡಿಯಲ್ಲಿ ಉರ್ಜಿತವಾಗಿರುವುದಿಲ್ಲ. ಆದ್ದರಿಂದ ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸುವಂತೆ ವಿನಂತಿಸಿಕೊಂಡಿರುವರು.

ಪ್ರತಿವಾದಿ **5** ರವರು ಸಲ್ಲಿಸಿದ ಲಿಖಿತಪತ್ರದ ಸಂಕ್ಷಿಪ್ತ ಸಾರಾಂಶ:

**5.** ಈ ಪ್ರತಿವಾದಿ **5** ರವರು ತಮ್ಮ ತಕರಾರಿನಲ್ಲಿ ಹೇಳುವುದೇನೆಂದರೆ, ಈ ಮಧ್ಯಂತರ ಅರ್ಜಿಯು ಕಾನೂನಿಂದಾಗಲೀ, ಸಂಗತಿಗಳಿಂದಾಗಲೀ ಉರ್ಜಿತವಾಗಿರುವುದಿಲ್ಲ. ಈ ಮಧ್ಯಂತರ ಅರ್ಜಿಗೆ ಲಗತ್ತಿಸಿರುವ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲ ಸಂಗತಿಗಳು ನಿಜವಿರುವುದಿಲ್ಲ ಹಾಗೂ ದುರುದ್ದೇಶ ಪೂರಕವಾಗಿ ತಪ್ಪು ತಿಳುವಳಿಕೆಯಿಂದ ಈ ಸುಳ್ಳು ದಾವೆಯನ್ನು ದಾಖಲು ಮಾಡಿರುವರು.

ವಾದಪತ್ರದ ಖಂಡಿಕೆ **3** ರಲ್ಲಿ ಹೇಳಿರುವಂತೆ ಕುಟುಂಬದ ಮೂಲ ಪುರುಷ ದಶಗಿರೆಪ್ಪ ಹಣಮಪ್ಪ ಮಾದರ ಹಾಗೂ ಆತನ ಹೆಂಡತಿ ವೆಂಕವ್ವ ಮಾದರ ಇವರಿಗೆ ವಾದಿ ಹಾಗೂ ಪ್ರತಿವಾದಿ ನಂ.**1** ರಿಂದ **4** ಇವರು ಮಕ್ಕಳು ಇರುವ ಸಂಗತಿ ಸರಿ ಇರುವುದು. ಸದರಿ ಖಂಡಿಕೆ ನಂ.**3** ರಲ್ಲಿ ಮುಂದುವರೆದು ಹೇಳಿದಂತೆ ವಾದಿ ಮತ್ತು ಪ್ರತಿವಾದಿಯರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರು ಇದ್ದು ದಾವೆಯ ಆಸ್ತಿಗಳು ಹಿರಿಯರಿಂದ ಬಂದಂತಹ ಆಸ್ತಿಗಳು ಇದ್ದು ಸದರಿ ದಾವೆಯ ಆಸ್ತಿಗಳನ್ನು ವಾದಿ ಪ್ರತಿವಾದಿಯರು ಸಾಮೂಹಿಕವಾಗಿ ವಹಿವಾಟಿ ಉಪಭೋಗ ಮಾಡುತ್ತಿರುತ್ತಾರೆ ಅನ್ನುವ ಸಂಗತಿ ಸುಳ್ಳಿನಿಂದ ಕೂಡಿರುವುದು.

**6.** ವಾದ ಪತ್ರದ ಖಂಡಿಕೆ **4** ರಲ್ಲಿ ಹೇಳಿರುವಂತೆ ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿಯರ ಪಿತ್ರಾರ್ಜಿತ ಆಸ್ತಿಗಳಾಗಿರುತ್ತವೆ ಎಂಬ ವಿಷಯ ಸುಳ್ಳಿನಿಂದ ಕೂಡಿರುತ್ತದೆ. ವಾದಿಯು ದಾವಾ ಆಸ್ತಿಗಳಲ್ಲಿ **1/5** ಹಿಸ್ಸೆ ಇರುತ್ತದೆ ಎಂಬ ವಿಷಯ ಸುಳ್ಳಿನಿಂದ ಕೂಡಿರುವುದು. ವಾದ ಪತ್ರದ ಖಂಡಿಕೆ **5** ರಿಂದ **9** ರಲ್ಲಿ ಹೇಳಿರುವ ಸಂಗತಿಗಳು ಸುಳ್ಳಿನಿಂದ ಕೂಡಿರುವುದು.

**7.** ಈ ದಾವೆಯ ನಿಜ ಸಂಗತಿ ಏನೆಂದರೆ ವಾದಿ ಹಾಗೂ ಪ್ರತಿವಾದಿ **1** ಮತ್ತು **3** ಇವರ ತಂದೆ ತಮ್ಮ ಜೀವಿತ ಕಾಲದಲ್ಲಿ ಸಾಕಷ್ಟು ಖರ್ಚು, ವೆಚ್ಚ ಮಾಡಿ ಅವರಿಗೆ ಬಂಗಾರ ವ ಹಣ ನೀಡಿ ಒಳ್ಳೆಯ ಮನೆತನಕ್ಕೆ ಲಗ್ನಮಾಡಿಕೊಟ್ಟಿದ್ದು ಆದ್ದರಿಂದ ವಾದಿ ಹಾಗೂ ಪ್ರತಿವಾದಿ ನಂ.**1** ಮತ್ತು **3** ಇವರು ದಾವೆಯ ಆಸ್ತಿಗಳಲ್ಲಿ ಸಾಮೂಹಿಕ ಕಬ್ಜೆ ವಹಿವಾಟಿನಲ್ಲಿ ಇರುವುದಿಲ್ಲ ಮತ್ತು ಅವರಿಗೆ ದಾವೆ ಆಸ್ತಿಗಳಲ್ಲಿ ಯಾವುದೇ ರೀತಿಯಾದ ಹಕ್ಕು ವ ಹಿತಾಸಕ್ತಿ ಇರುವುದಿಲ್ಲ. ಈಗಾಗಲೇ ವಾದಿ ಮತ್ತು ಪ್ರತಿವಾದಿ **1** ರಿಂದ **4** ಇವರ ನಡುವೆ ಪಾಲು ವಿಭಾಗವಾಗಿದ್ದು ಸದರಿ ಪಾಲು

ವಿಭಾಗದಲ್ಲಿ ಜಮೀನು ರಿ.ಸ.ನಂ.**65/37, 75/2** ಬಿ ಜಮೀನುಗಳು ಪ್ರತಿವಾದಿ **2** ಇವಳ ಪಾಲಿಗೆ ಬಂದಿರುವವು. ರಿ.ಸ.ನಂ.**75/6** ಪ್ರತಿವಾದಿ **4** ಈತನ ಪಾಲಿಗೆ ಬಂದಿದ್ದು ದಾವೆಯ ಜಮೀನು ರಿ.ಸ.ನಂ.**9/2** ಈ ಜಮೀನು ಪ್ರತಿವಾದಿ **2** ಮತ್ತು **4** ಇವರ ಪಾಲಿಗೆ ಬಂದಿರುವವು. ಆ ಪ್ರಕಾರ ಅವರ ಹೆಸರುಗಳು ದಾವಾ ಆಸ್ತಿಯ ಹರಃ ಗಳಲ್ಲಿ ದಾಖಲು ಆಗಿರುತ್ತದೆ. ಆದ್ದರಿಂದ ಈ ವಾದಿಯ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ಯಾವುದೇ ಪರಿಹಾರವನ್ನು ಪಡೆಯಲು ಅರ್ಹರಿರುವುದಿಲ್ಲ. ಆದ್ದರಿಂದ ಈ ಮಧ್ಯಂತರ ಅರ್ಜಿಯನ್ನು ವಜಾಗೊಳಿಸುವಂತೆ ವಿನಂತಿಸಿಕೊಂಡಿರುವರು.

**8.** ಈ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳು ನನ್ನ ಅವಗಾಹನೆಗೆ ಉದ್ಭವಿಸಿದವು.

**1.** ಮಧ್ಯಂತರ ಅರ್ಜಿ ಸಂಖ್ಯೆ: **12** ನ್ನು ವಾದಿಯು ಮೇಲ್ನೋಟಕ್ಕೆ ಸಮಂಜಸವಾದ ದಾವೆಯನ್ನು ಹೊಂದಿರುತ್ತಾರೆ ಎಂಬುವುದನ್ನು ವಾದಿಯು ರುಜುವಾತುಪಡಿಸುವರೇ **?**

**2.** ಈ ಮಧ್ಯಂತರ ಅರ್ಜಿಯು ತಮ್ಮ ಪರವಾಗಿ ಇರುತ್ತದೆ ಎಂಬುದನ್ನು ವಾದಿಯು ರುಜುವಾತುಪಡಿಸುವರೇ **?**

**3.** ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ಒಂದು ವೇಳೆ ತಾತ್ಕಾಲಿಕ ನಿರ್ಬಂಧಕಾಜ್ಞೆ ನೀಡದೆ ಇದ್ದರೆ ವಾದಿಗೆ ತುಂಬಲಾರದ ನಷ್ಟ ಉಂಟಾಗುವ ಸಾಧ್ಯತೆ ಇರುತ್ತದೆಂಬುದನ್ನು ಮೇಲ್ನೋಟಕ್ಕೆ ವಾದಿಯು ರುಜುವಾತುಪಡಿಸುವರೇ **?**

**4.** ಏನು ಆದೇಶ **?**

**9.** ಮೇಲೆ ಹೇಳಿದ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸುತ್ತೇನೆ.

ಅಂಶ **1 :** ಸಕಾರಾತ್ಮಕವಾಗಿ,

ಅಂಶ **2 :** ಸಕಾರಾತ್ಮಕವಾಗಿ,

ಅಂಶ **3 :** ಸಕಾರಾತ್ಮಕವಾಗಿ,

ಅಂಶ **4 :** ಅನ್ನು ಅಂತಿಮ ಆದೇಶದಂತೆ,

ಈ ಕೆಳಕಂಡ ಕಾರಣಗಳಿಗಾಗಿ.

<u>ಕಾರಣಗಳು</u>

**10.** <u>ಅಂಶ **1** ರಿಂದ **3**</u> **:** ಈ ಅಂಶಗಳು ಒಂದಕ್ಕೊಂದು ಸಂಬಂಧಪಟ್ಟಿರುವುದರಿಂದ ಸಂಗತಿಗಳ ಪುನರಾವರ್ತನೆಯಾಗುವುದನ್ನು ತಪ್ಪಿಸುವ ಸಲುವಾಗಿ ಅವುಗಳನ್ನು ಏಕಕಾಲಕ್ಕೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **39** ನಿಯಮ **1** ಮತ್ತು **2** ರ ಅಡಿಯಲ್ಲಿ ನಿರ್ಬಂಧಕಾಜ್ಞೆ ಹೊರಡಿಸುವ ಸಲುವಾಗಿ ನ್ಯಾಯಾಲಯವು ಅರ್ಜಿಯನ್ನು ಮೇಲ್ನೋಟಕ್ಕೆ ಮೊಕದ್ದಮೆ ಮತ್ತು ಸಂಭಾವನೆಯ ರೀತಿಯಿಂದ ಎಂಬ ಆಧಾರದ ಮೇಲೆ ಯಾವುದೇ ವಿಶ್ಲೇಷಣೆ ಮಾಡಿರುವುದಿಲ್ಲ. ತಾತ್ಕಾಲಿಕ ತಡೆಯಾಜ್ಞೆಯನ್ನು ಪಡೆಯಬೇಕಾದರೆ ಅರ್ಜಿದಾರರು ವಿಚಾರಣೆಗೆ ಹೋಗಲು ಮೇಲ್ನೋಟಕ್ಕೆ ಸೂಕ್ತ ವಿವಾದವನ್ನು ಹೊಂದಿರಬೇಕು. ಕಾನೂನುಬದ್ದ ಹಕ್ಕು ತೀರ್ಮಾನಿಸುವುದಕ್ಕೆ ಮೊದಲು ಸರಿಪಡಿಸುವಂತೆ ಸೂಕ್ತ ವಿವಾದವನ್ನು ಹೊಂದಿರಬೇಕು. ಕಾನೂನುಬದ್ಧ ಹಕ್ಕು ತೀರ್ಮಾನಿಸುವುದಕ್ಕೆ ಮೊದಲು ಸರಿಪಡಿಸುವಂತೆ ಹಾನಿಯನ್ನು ರಕ್ಷಿಸಲು ರಕ್ಷಣೆ ಹೊಂದಿರಬೇಕು. ತಡೆಯಾಜ್ಞೆಯನ್ನು ನೀಡುವುದಕ್ಕಿಂತ ಅದನ್ನು ಪ್ರಧಾನ ಮಾಡದೇ ಇರುವುದರಿಂದ ಉಂಟಾಗುವ ಹಾನಿ ಹೆಚ್ಚಿನದು ತೀವ್ರತರಹದ್ದಾಗಿರುತ್ತದೆ.

**11.** ಸದರಿ ದಾವೆಯನ್ನು ವಾದಿಯು ಪ್ರತಿವಾದಿ **1** ರಿಂದ **5** ರವರ ವಿರುದ್ಧ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ವಾದಿಯ ಪಾಲಿಗೆ ಬರತಕ್ಕಂತಹ **1/5** ಹಿಸ್ಸೆಯ ಪಾಲು ವಿಭಾಗ ಕೋರಿ ಈ ದಾವೆಯನ್ನು ದಾಖಲು ಮಾಡಿರುವರು.

**12.** ವಾದಿ ವಾದ ಪತ್ರದಲ್ಲಿ ಹೇಳಿರುವಂತೆ ವಾದಿ ಮತ್ತು ಪ್ರತಿವಾದಿಯರ ಕುಟುಂಬದ ಮೂಲ ಪುರುಷ ದಶಗಿರೆಪ್ಪ ತಂದೆ ಹಣಮಪ್ಪ ಮಾದರ ಮತ್ತು ಅವರ ಹೆಂಡತಿ ಯಂಕವ್ವ ಅವರಿಗೆ **5** ಜನ ಮಕ್ಕಳಿರುವರು. ವಾದಿ ಮತ್ತು ಪ್ರತಿವಾದಿ ನಂ.**1** ರಿಂದ **5** ರವರು ಹಿಂದೂ ಅವಿಭಕ್ತ ಕುಟುಂಬದ ಸದಸ್ಯರಾಗಿರುವರು. ದಾವಾ ಆಸ್ತಿಗಳು

ವಾದಿ ಹಾಗೂ ಪ್ರತಿವಾದಿ **1** ರಿಂದ **4** ರವರ ಪಿತ್ರಾರ್ಜಿತ ಆಸ್ತಿಗಳಾಗಿರುವವು. ದಾವಾ ಜಮೀನುಗಳಲ್ಲಿ ವಾದಿ ಹಾಗೂ ಪ್ರತಿವಾದಿ **1** ರಿಂದ **4** ರವರಿಗೆ ತಲಾ **1/5** ಹಿಸ್ಸೆ ಇರುವುದು. ದಿನಾಂಕ. **29.10.2020** ರಂದು ವಾದಿಯು ತಮ್ಮ ಪಾಲಿನ ಹಿಸ್ಸೆ ನೀಡುವಂತೆ ಈ ಪ್ರತಿವಾದಿಯರಿಗೆ ವಿನಂತಿಸಿದಾಗ ಅವರು ನಿರಾಕರಿಸಿರುವುದರಿಂದ ಈ ದಾವೆಗೆ ವಾಜ್ಯ ಕಾರಣ ಉಂಟಾಗಿರುವುದಾಗೆಂದು ಹೇಳಿ ಈ ದಾವೆಯನ್ನು ದಾಖಲು ಮಾಡಿರುವರು.

**13.** ಪ್ರತಿವಾದಿಯರ ಪ್ರತಿವಾದವೇನೆಂದರೆ ವಾದಿ ಹಾಗೂ ಪ್ರತಿವಾದಿ **1** ಮತ್ತು **3** ಇವರ ತಂದೆ ತಮ್ಮ ಜೀವಿತ ಕಾಲದಲ್ಲಿ ಸಾಕಷ್ಟು ಖರ್ಚು, ವೆಚ್ಚ ಮಾಡಿ ಅವರಿಗೆ ಬಂಗಾರ ವ ಹಣ ನೀಡಿ ಒಳ್ಳೆಯ ಮನೆತನಕ್ಕೆ ಲಗ್ನಮಾಡಿಕೊಟ್ಟಿದ್ದು ಆದ್ದರಿಂದ ವಾದಿ ಹಾಗೂ ಪ್ರತಿವಾದಿ ನಂ.**1** ಮತ್ತು **3** ಇವರು ದಾವೆಯ ಆಸ್ತಿಗಳಲ್ಲಿ ಸಾಮೂಹಿಕ ಕಬ್ಜೆ ವಹಿವಾಟಿನಲ್ಲಿ ಇರುವುದಿಲ್ಲ ಮತ್ತು ಅವರಿಗೆ ದಾವೆ ಆಸ್ತಿಗಳಲ್ಲಿ ಯಾವುದೇ ರೀತಿಯಾದ ಹಕ್ಕು ವ ಹಿತಾಸಕ್ತಿ ಇರುವುದಿಲ್ಲ. ಈಗಾಗಲೇ ವಾದಿ ಮತ್ತು ಪ್ರತಿವಾದಿ **1** ರಿಂದ **4** ಇವರ ನಡುವೆ ಪಾಲು ವಿಭಾಗವಾಗಿದ್ದು, ಸದರಿ ಪಾಲು ವಿಭಾಗದಲ್ಲಿ ಜಮೀನು ರಿ.ಸ.ನಂ.**65/37, 75/2** ಬಿ ಜಮೀನುಗಳು ಪ್ರತಿವಾದಿ **2** ಇವಳ ಪಾಲಿಗೆ ಬಂದಿರುವವು. ರಿ.ಸ.ನಂ.**75/6** ಪ್ರತಿವಾದಿ **4** ಈತನ ಪಾಲಿಗೆ ಬಂದಿದ್ದು ದಾವೆಯ ಜಮೀನು ರಿ.ಸ.ನಂ.**9/2** ಈ ಜಮೀನು ಪ್ರತಿವಾದಿ **2** ಮತ್ತು **4** ಇವರ ಪಾಲಿಗೆ ಬಂದಿರುವವು ಎಂದು ಹೇಳಿರುವರು.

**14.** ಈ ದಾವೆಯಲ್ಲಿನ ವಾದಿ ಮತ್ತು ಪ್ರತಿವಾದಿಯರ ಸಂಬಂಧದ ಬಗ್ಗೆ ಯಾವುದೇ ವಿವಾದ ಇರುವುದಿಲ್ಲ. ವಾದಿಯು ತಮ್ಮ ವಾದಪತ್ರದಲ್ಲಿ ತಮ್ಮ ದಾವಾ ಆಸ್ತಿಗಳು ತಮ್ಮ ಮತ್ತು ಪ್ರತಿವಾದಿ **1** ರಿಂದ **5** ರವರ ಜಂಟಿ ಅವಿಭಕ್ತ ಕುಟುಂಬದ

ಪಿತ್ರಾರ್ಜಿತ ಆಸ್ತಿಗಳಾಗಿರುವುದಾಗೆಂದು ಹೇಳಿರುವರು. ಈ ಸಂಗತಿಯನ್ನು ರುಜುವಾತು ಪಡಿಸುವ ಭಾರ ವಾದಿಯರ ಮೇಲೆ ಮಾತ್ರ ಇರುವುದು. ದಾವಾ ಆಸ್ತಿಗಳು ವಾದಿ ಮತ್ತು ಪ್ರತಿವಾದಿಯರ ಏಕತ್ರ ಕುಟುಂಬದ ಪಿತ್ರಾರ್ಜಿತ ಆಸ್ತಿ ಎಂಬುವುದನ್ನು ಹಾಗೂ ದಾವಾ ಆಸ್ತಿಯಲ್ಲಿ ವಾದಿಯ ಪಾಲು ಪಡೆಯುವ ಹಕ್ಕನ್ನು ಹೊಂದಿರುವರೋ ಅಥವಾ ಇಲ್ಲ ಎಂಬುವುದನ್ನು ನಿರ್ಧರಿಸಬೇಕಾದರೆ ಉಭಯ ಪಕ್ಷಗಾರರ ಸಾಕ್ಷಿಗಳ ವಿಚಾರಣೆ ಅವಶ್ಯಕತೆ ಇರುವುದು. ಆದ್ದರಿಂದ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ತಡೆಯಾಜ್ಞೆಯನ್ನು ನೀಡದೇ ಇದ್ದರೆ ವಾದಿಗೆ ತುಂಬಲಾರದ ನಷ್ಟ ಹಾಗೂ ಹಾನಿ ಸಂಭವಿಸುವುದು. ಈ ಕಾರಣಕ್ಕಾಗಿ ಈ ಹಂತದಲ್ಲಿ ವಾದಿಯು ಹಾಜರುಪಡಿಸಿರುವ ದಾಖಲೆಗಳು ಮತ್ತು ಮಧ್ಯಂತರ ಅರ್ಜಿಗೆ ಲಗತ್ತಿಸಿರುವ ಪ್ರಮಾಣಪತ್ರದಲ್ಲಿ ಹೇಳಿರುವಂತೆ ದಾವಾ ಆಸ್ತಿಗಳು ವಾದಿಯ ಮತ್ತು ಪ್ರತಿವಾದಿ **1** ರಿಂದ **4** ರವರ ಜಂಟಿ ಕಬ್ಜೆಯನ್ನು ಹೊಂದಿರುವರು ಅಥವಾ ಇಲ್ಲ ಹಾಗೂ ಹಿಂದೂ ಅವಿಭಕ್ತ ಕುಟುಂಬದ ಸದಸ್ಯರು ಆಗಿರುವರು ಅಥವಾ ಇಲ್ಲ ಹಾಗೂ ವಾದಿಯು ವಾದ ಪತ್ರದಲ್ಲಿ ಹೇಳಿರುವಂತೆ ಸಂಗತಿಗಳನ್ನು ರುಜುವಾತುಪಡಿಸುವವರೆಗೂ ದಾವಾ ಆಸ್ತಿಗಳ ಸ್ಥಿತಿಗತಿಗಳನ್ನು ಯಥಾಸ್ಥಿತಿಯಲ್ಲಿ ಮುಂದುವರೆಸಿಕೊಂಡು ಹೋಗುವ ಅವಶ್ಯಕತೆ ಇರುವುದು. ಆದ್ದರಿಂದ ಈ ದಾವೆಯ ವಿಚಾರಣೆ ಹಂತದಲ್ಲಿ ದಾವಾ ಆಸ್ತಿಗಳನ್ನು ಪ್ರತಿವಾದಿ **5** ರವರು ಪರಿಷ್ಕೃತ ಪರಿಹಾರದ ಹಣವನ್ನು ಪಡೆದುಕೊಂಡರೆ ವಾದಿಗೆ ತುಂಬಲಾರದ ಹಾನಿ ವ ನಷ್ಟ ಉಂಟಾಗುವ ಸಾದ್ಯತೆ ಇರುವುದರಿಂದ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಿದ್ದಲ್ಲಿ ಪ್ರತಿವಾದಿಯರಿಗೆ ಯಾವುದೇ ರೀತಿಯಾದ ಹಾನಿ ನಷ್ಟ ಉಂಟಾಗುವುದಿಲ್ಲ. ಆದ್ದರಿಂದ ವಾದಿಯು ಮೆಲ್ನೋಟದ ಕೇಸು ಇರುವುದಾಗಿ ಎಂದು ತೋರಿಸಿದ್ದು ಹಾಗೂ ಅನುಕೂಲತೆಯ ಒಲುವು ಸಹ ವಾದಿಯ ಪರವಾಗಿರುವುದಾಗಿ ಎಂದು ನಿಶ್ಚಯಿಸಿ ಈ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸದಿದ್ದಲ್ಲಿ ವಾದಿಗೆ ತುಂಬಲಾರದ ನಷ್ಟ ಆಗುವುದು. ಆದ್ದರಿಂದ ಅಂಶ **1** ರಿಂದ **3** ಅನ್ನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

**15.** **ಅಂಶ 4 ಃ** ಮೇಲ್ಕಾಣಿಸಿದ ಕಾರಣಗಳನ್ನು ಆಧರಿಸಿ ಈ ಕೆಳಕಂಡಂತೆ ಆದೇಶಿಸುವೇನು...

**ಆದೇಶ**

ವಾದಿಯರು ದಿವಾಣಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ **39** ನಿಯಮ **1** ಮತ್ತು **2** ರಡಿಯಲ್ಲಿ ಸಲ್ಲಿಸಿದ ಮಧ್ಯಂತರ ಅರ್ಜಿ ಸಂಖ್ಯೆ: **12** ಅನ್ನು ಪುರಸ್ಕರಿಸಲಾಗಿದೆ.

ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ಪ್ರತಿವಾದಿ ಸಂಖ್ಯೆ.**1** ರಿಂದ **5** ರವರು ದಾವಾ ಅನುಸೂಚಿತ "ಅ" ದ ಆಸ್ತಿಗಳನ್ನು ಬೇರೆಯವರಿಗೆ ಯಾವುದೇ ರೀತಿಯಿಂದ ಖರೀದಿ, ಒತ್ತಿ, ಸಂಚಕಾರ ಮತ್ತು ಪರಭಾರೆ ಮಾಡದಂತೆ ಈ ಮಧ್ಯಂತರ ಅರ್ಜಿಯಲ್ಲಿ ಕೋರಿರುವಂತೆ ತಾತ್ಕಾಲಿಕ ನಿರ್ಬಂಧಕಾಜ್ಞೆಯಿಂದ ನಿರ್ಬಂಧಿಸಲಾಗಿದೆ.

ಖರ್ಚಿನ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

(ಈ ತೀರ್ಪನ್ನು ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ನೇರವಾಗಿ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿದ ನಂತರ ಓದಿ ತಿದ್ದುಪಡಿ ಮಾಡಿ ಬಹಿರಂಗ ನ್ಯಾಯಾಲಯದಲ್ಲಿ ಇದೇ ದಿನಾಂಕಃ **13** ನೇ ನವೆಂಬರ್ **2024** ನೇ ದಿನದಂದು ವಿದ್ಯುಕ್ತವಾಗಿ ಘೋಷಿಸಲಾಯಿತು).

VIJAYAKUMAR KANNUR

Digitally signed by VIJAYAKUMAR KANNUR
Date: 2024.11.15 16:56:43 +0530

(ವಿಜಯಕುಮಾರ.ಎಮ್.ಕನ್ನೂರು)
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ಗಳು, ಮುಧೋಳ.